ಡಿಡಬ್ಲೂ.1: ಆಸೀಫ್ ಅಲಿ .,

ಲಘು ವ್ಯವಹಾರಗಳ ಹಾಗೂ ಎಸಿಜೆಎಂ ನ್ಯಾಯಾಲಯ
ಬೆಂಗಳೂರು

## ಸಿಸಿ ನಂಬರ್:9381/2021

| | |
|---|---|
| ಸಾಕ್ಷಿದಾರರ ಹೆಸರು | ಆಸೀಫ್ ಅಲಿ |
| ತಂದೆಯ ಹೆಸರು | ಅಲಿ |
| ವಯಸ್ಸು | 46 ವರ್ಷ |
| ಉದ್ಯೋಗ | ಖಾಸಗಿ ಉದ್ಯೋಗ |
| ವಾಸಸ್ಥಳ | ವಸಂತನಗರ, ಬೆಂಗಳೂರು. |

**ದಿನಾಂಕ:04.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ವಕೀಲರಿಂದ:**

ಪಿರ್ಯಾದುದಾರರು ನನಗೆ ಪರಿಚಯವಿರುತ್ತಾರೆ. ನನಗೆ ಹಣಕಾಸಿನ ತೊಂದರೆ ಇದ್ದ ಕಾರಣ 2016 ನೇ ಇಸವಿಯಲ್ಲಿ ಪಿರ್ಯಾದುದಾರರನ್ನು ರೂ.50,000/- ಗಳ ಸಾಲ ಕೇಳಿದ್ದೆನು. ಆಗ ಅವರು ರೂ.15,000/- ಬಡ್ಡಿ ಹಣ ಹಿಡಿದುಕೊಂಡು ರೂ.35,000/- ನೀಡಿದರು. ನಾನು ಪ್ರತಿ ತಿಂಗಳು ರೂ.5,000/- ಗಳಂತೆ ಒಟ್ಟು ಏಳು ತಿಂಗಳ ಅವಧಿಯಲ್ಲಿ ರೂ.35,000/- ಗಳನ್ನು ಪಿರ್ಯಾದುದಾರರಿಗೆ ಹಣ ಪಾವತಿಸಿದೆನು. ಉಳಿದ ಮೂರು ಕಂತುಗಳನ್ನು ಅಂದರೆ ರೂ.15,000/- ಗಳನ್ನು ಪಾವತಿಸಲು ಸಾಧ್ಯವಾಗಲಿಲ್ಲ. ನಾನು ಪಿರ್ಯಾದುದಾರರಿಂದ ಹಣ ಪಡೆದುಕೊಂಡಾಗ ಅವರು ನನ್ನಿಂದ ಒಂದು ಸಹಿ ಮಾಡಿದ ಖಾಲಿ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದರು. ಅದನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಚೆಕ್ಕಿನ ಎಲ್ಲಾ ಬರವಣಿಗೆಗಳನ್ನು ಪಿರ್ಯಾದುದಾರೇ ಮಾಡಿರುತ್ತಾರೆ. ಆ ಕಾರಣ ನಾನು ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೀಡಲು ಬಾಧ್ಯಸ್ತನಾಗಿರುವುದಿಲ್ಲ. ಬಾಕಿ ಉಳಿದಂತಹ

**ಡಿಡಬ್ಲೂ.1: ಆಸೀಫ್ ಅಲಿ .,**

ರೂ.15,000/- ಗಳನ್ನು ಪಾವತಿಸಲು ಬದ್ದನಾಗಿರುತ್ತೇನೆ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ತಮಲ್ಲಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ** ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದ್ದೆ)**

**(ಓ. ಹೇ. ಕೇ. ಸ. ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.